ಕರ್ಮಚಾರಿಗಳ ವಿಚಾರದಲ್ಲಿ ಗಾಂಧಿ ವ್ಯಕ್ತಪಡಿಸಿದ ವಿಚಾರಗಳು ಮತ್ತು ಅವರ ಪ್ರತೀಕಾತ್ಮಕತೆ ಯಾವುದೇ ಬದಲಾವಣೆಯನ್ನು ತರಲಿಲ್ಲ. ಆ ಮೂಲಭೂತ ಬದಲಾವಣೆ ಇಲ್ಲದ್ದರಿಂದಲೇ ಮೋದಿ ತಮ್ಮ ಸ್ವಚ್ಛತಾ ಆಂದೋಲನವನ್ನು ಸಫಾಯಿ ಕರ್ಮಚಾರಿಗಳ ಜಾತಿಯನ್ನು ಪ್ರತಿನಿಧಿಸುವ ವಾಲ್ಮೀಕಿ ಸಮುದಾಯದ ಬಸ್ತಿಯಿಂದಲೇ ಪ್ರಾರಂಭಿಸಬೇಕಾಯಿತು. ಇದೇ ಜಾತಿವ್ಯವಸ್ಥೆಯು ಹೇಗೆ ಅನೇಕ ದಶಕಗಳಿಂದ ನಾಶವಾಗುವುದಕ್ಕೆ ಬದಲು ಬಲಗೊಳ್ಳುತ್ತಾ ಹೋಗುತ್ತಿದೆ ಎನ್ನುವ ವಿಚಾರವನ್ನು ನಾವು ಪರಿಗಣಿಸಬೇಕಾಗಿದೆ.

ಅಂಬೇಡ್ಕರ್ ನಂತರ ದಲಿತ–ಬಹುಜನರ ಮಾತನ್ನು ಭಿನ್ನವಾಗಿ ಮಾತಾಡಿದ ರಾಜಕೀಯ ನಾಯಕ ಕಾನ್ಷಿರಾಮ್. ಅವರಲ್ಲಿ ಬಲವಾದ ವಿಚಾರಧಾರೆಯ ಮೂಲ ಸೆಲೆಯಿರಲಿಲ್ಲ. ಅವರಲ್ಲಿದ್ದದ್ದು ರಾಜಕೀಯ ಚತುರತೆ ಮತ್ತು ಅಧಿಕಾರವನ್ನು ಕೈಗೂಡಿಸಿಕೊಳ್ಳುವ ಚಾಕಚಕ್ಯತೆ ಎಂದು ತೇಲ್ತುಂಬ್ಡೆ ಹೇಳುತ್ತಾರೆ. ಆದರೆ, ಆ ಸಂದರ್ಭದಲ್ಲಿ ಅವರು ಕಾನ್ಷಿರಾಮ್ ಮತ್ತು ಮಾಯಾವತಿಯವರ ಪಕ್ಷ ನಿರ್ಮಾಣ ಪ್ರಕ್ರಿಯೆಯಲ್ಲಿರುವ ಎರಡು ಮುಖ್ಯವಿಚಾರಗಳನ್ನು ಹೊರತರುತ್ತಾರೆ. ಒಂದು – ಅವರು ಕಟ್ಟಿದ ಪಕ್ಷಕ್ಕೆ ಒಂದು ನಿಯಮ, ಚೌಕಟ್ಟು ಮತ್ತು ಕಟ್ಟಲೆಗಳೇ ಇರಲಿಲ್ಲ ಎನ್ನುವುದು. ಇದರಿಂದ ಬೇರಾವ ಅಧಿಕಾರ ಕೇಂದ್ರವೂ ಬೆಳೆಯದಂತೆ ನೋಡಿಕೊಳ್ಳಲು ಸಾಧ್ಯವಾಗಿ ಭಿನ್ನಮತೀಯರ ಕಾಟ ಅವರಿಗೆ ಉಂಟಾಗಲಿಲ್ಲ ಎಂದು ವಾದಿಸಿದರೂ ಅದರಲ್ಲಿದ್ದ ಮಿತಿಗಳು ಮತ್ತು ಆ ಸಂರಚನೆ ಇಂದು ಕಂಡಿರುವ ದುರ್ಗತಿಯನ್ನು ಕಾಣಬಹುದು. ಎರಡನೆಯ ಮತ್ತು ಗಮ್ಮತ್ತಿನ ವಿವರವೆಂದರೆ, ಬಹುಜನ ಸಮಾಜ ಪಕ್ಷ ಎಂದೂ ಯಾವುದೇ ಚುನಾವಣಾ ಘೋಷಣೆಗಳನ್ನು ಮಾಡಿಲ್ಲ, ಘೋಷಣಾಪತ್ರವನ್ನು ಜಾರಿ ಮಾಡಿಲ್ಲ ಎನ್ನುವ ವಿವರ. ಚುನಾವಣೆಗೆ ಮುನ್ನ ತಮಗೆ ಓಟು ಕೋರುತ್ತಾ ಒಂದು ಮನವಿಪತ್ರವನ್ನು ಜಾರಿಮಾಡುತ್ತಿದ್ದರೇ ಹೊರತು ಘೋಷಣಾಪತ್ರವನ್ನು ಜಾರಿಮಾಡಿಲ್ಲ ಎನ್ನುವುದು ಆಸಕ್ತಿಕರ ವಿಚಾರ. ಕೇಜ್ರಿವಾಲರ ವಿಚಾರಧಾರೆಯಿಲ್ಲದ್ದೂ ಕಾನ್ಷಿರಾಮ್–ಮಾಯಾವತಿಯವರ ರಾಜಕೀಯ ಚತುರತೆ ಎರಡರಲ್ಲೂ ಒಂದು ವಿಚಿತ್ರವಾದ ಸಾಮ್ಯತೆ ನಮಗೆ ಕಾಣಿಸುತ್ತದೆ. ಇದು ತಕ್ಷಣ ಅಧಿಕಾರವನ್ನು ಪಡೆಯುವುದಕ್ಕೆ ಮತ್ತು ನಿಷ್ಠರನ್ನು ತಮ್ಮೆಡೆಗೆ ಸೆಳೆಯುವುದಕ್ಕೆ ಉಪಯುಕ್ತವಾಗುತ್ತದಾದರೂ ಒಂದು ವಿಸ್ತೃತವಾದ ದೃಕ್ಪಥವನ್ನು ನೀಡುವುದಿಲ್ಲ.

ಆಜಾದಿಯ ಅಮೃತ ಮಹೋತ್ಸವ ಆಚರಿಸುತ್ತಿರುವ ಈ ಸಂದರ್ಭದಲ್ಲಿ, ಅಸಮಾನತೆಯು ಹಿಂದೆಂದಿಗಿಂತ ಹೆಚ್ಚುತ್ತಿರುವುದನ್ನು ಕಾಣುತ್ತಿರುವ ಈ ಸಂದರ್ಭದಲ್ಲಿ, ನಿರಂಕುಶತೆಯು ಹೆಚ್ಚುತ್ತಿರುವ ಈ ಸಂದರ್ಭದಲ್ಲಿ, ಅಂಬೇಡ್ಕರ್ ವಿಚಾರಗಳನ್ನು ಮತ್ತೊಮ್ಮೆ ಮಥಿಸಬೇಕಾದ, ಒಳಗೊಳ್ಳುವಿಕೆಯ ಪರಿಭಾಷೆಯನ್ನು, ಬಹುಜನ, ಸರ್ವಜನ, ಎನ್ನುವಂತಹ ಪದಪುಂಜಗಳ ಹೊಸ ಅರ್ಥಗಳನ್ನು ಕಂಡುಕೊಳ್ಳಬೇಕಾದ ಪರಿಸ್ಥಿತಿಯಲ್ಲಿ ನಾವಿದ್ದೇವೆ.

ತಲೋಜಾ ಕಾರಾಗೃಹದಲ್ಲಿ ಬಂಧನದಲ್ಲಿರುವ ತೇಲ್ತುಂಬ್ಡೆಯವರು ತಮ್ಮ ವಿಚಾರಗಳನ್ನು ವ್ಯಕ್ತಪಡಿಸುವ ಸ್ವಾತಂತ್ರ್ಯವನ್ನು ಕಳೆದುಕೊಂಡು, ತಮ್ಮ ಪತ್ನಿಯೊಂದಿಗೆ ವಾರಕ್ಕೆ ಎರಡು ನಿಮಿಷಕಾಲ ಮಾತ್ರ ಸಂವಾದವನ್ನು ಮಾಡುವಷ್ಟೇ ಅನುಮತಿ ಪಡೆದಿದ್ದಾರೆ. ಈ ವಿಷಮ ಸಮಯದಲ್ಲಿ, ಅವರು ಸಾರ್ವಜನಿಕ ಕ್ಷೇತ್ರದಲ್ಲಿ ಬಿಟ್ಟುಹೋಗಿರುವ ವಿಚಾರಗಳಿಂದ ಅವರ ವ್ಯಕ್ತಿತ್ವವನ್ನು ಅರ್ಥೈಸುವ, ನಿಕಷಕೊಡ್ಡುವ ಕೆಲಸವನ್ನು ಮಾಡಬೇಕಾಗಿದೆ.

ವಿಶ್ವದ 50 ಅತ್ಯುತ್ತಮ ವಿಚಾರವಾದಿಗಳಲ್ಲಿ ಆನಂದ್ ತೇಲ್ತುಂಬ್ಡೆಯವರ ಹೆಸರನ್ನು ಸೇರಿಸಲು 'ಪ್ರಾಸ್ಪೆಕ್ಟ್' ಪತ್ರಿಕೆಯು ನಡೆಸುತ್ತರುವ ಮತಸಂಗ್ರಹಣೆಯಲ್ಲಿ ಅವರ ವಿಚಾರಗಳ ಜೊತೆ ಎಷ್ಟು ಜನ ತೊಡಗಿಕೊಂಡಿದ್ದಾರೆಂದು ತಿಳಿಯಬಹುದು. ಅದಕ್ಕಿಂತ ಮುಖ್ಯವಾದ ವಿಚಾರವೆಂದರೆ, ತೇಲ್ತುಂಬ್ಡೆಯವರ ವಿಚಾರಗಳು ತಲೋಜಾ ಕಾರಾಗೃಹದ ಬಂಧನದಲ್ಲಿವೆ ಎನ್ನುವುದು. ಅವರೊಂದಿಗೆ ನಮ್ಮ ಭಿನ್ನಾಭಿಪ್ರಾಯವಿರಬಹುದು, ಆದರೆ, ಅವರ ಮಾತುಗಳನ್ನು ಕೇಳಿಸಿಕೊಳ್ಳುವ ಸಹಿಷ್ಣುಭಾವ ಸ್ವಾತಂತ್ರ್ಯೋತ್ಸವದ ಈ ಅಮೃತ ವರ್ಷದಲ್ಲಿದೆಯೇ? ವಿಚಾರವಿಲ್ಲದೇ ಮಾತಿಲ್ಲದೇ ಮನೆಮನೆಯಲ್ಲೂ ಬಾವುಟ ಹಾರಿಸುವುದರಿಂದ ನಾವು ಸಾಧಿಸುವುದಾದರೂ ಏನು? ●